**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪಂರಾ 254 ಜಿಪಸ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:18-09-2020.

**:ಸುತ್ತೋಲೆ:**

ವಿಷಯ: ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿಗಳಿಗೆ ನಿಗಧಿಪಡಿಸಿರುವ ಹಾಗೂ ಸ್ವಂತ ಸಂಪನ್ಮೂಲಗಳಿಂದ ಬರುವ ಅನುದಾನ ಸೇರಿಸಿ (ವೇತನ ಬಾಬ್ತನ್ನು ಹೊರತುಪಡಿಸಿ) ಒಟ್ಟು ಅನುದಾನದಲ್ಲಿ ಶೇಕಡ 5%ರಷ್ಟು ಅನುದಾನವನ್ನು ವಿಶೇಷಚೇತನರ ಸರ್ವತೋಮುಖ ಅಭಿವೃದ್ಧಿಗಾಗಿ ಬಳಕೆ ಮತ್ತು ವಿವಿಧ ಇಲಾಖೆಗಳ ಹಾಗೂ ಇಲಾಖೇತರರ ಸಮನ್ವಯತೆಯಿಂದ ವಿಶೇಷಚೇತನರ ಸಮಗ್ರ ಅಭಿವೃದ್ಧಿ ಕುರಿತು.

ಉಲ್ಲೇಖ:
1. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪಂರಾ/191/ಜಿಪಸ/2020, ಬೆಂಗಳೂರು, ದಿನಾಂಕ 30-05-2020
2. ದಿನಾಂಕ 22-07-2020ರಂದು ನಡೆಸಲಾದ ಸಭೆಯ ನಡವಳಿಗಳು.
3. ವಿಕಲಚೇತನರ ಹಕ್ಕುಗಳ ಅಧಿನಿಯಮ 2016.
4. ಸರ್ಕಾರದ ಆದೇಶ ಸಂಖ್ಯೆ:ಮಮಇ/237/ಪಿ.ಎಚ್.ಪಿ.2007/ದಿನಾಂಕ:16-08-2007(ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಗ್ರಾಮೀಣ ಅಂಗವಿಕಲರ ಪುನರ್ವಸತಿ ಕಾರ್ಯಕ್ರಮ ಅನುಷ್ಠಾನದ ಪರಿಶೀಲನಾ ಸಮಿತಿ).
5. ಸರ್ಕಾರದ ಆದೇಶ ಸಂಖ್ಯೆ:ಮಮಇ 161 ಪಿಎಚ್‌ಪಿ 2020 ದಿನಾಂಕ 26-08-2020.

*****

ವಿಶೇಷಚೇತನರ ಹಕ್ಕುಗಳ ಅಧಿನಿಯಮ 2016ರಲ್ಲಿ ಆದೇಶಿಸಿರುವಂತೆ ವಿಶೇಷಚೇತನ ವ್ಯಕ್ತಿಗಳಿಗೆ ಅವಶ್ಯವಿರುವ ಎಲ್ಲಾ ಸೇವೆಗಳನ್ನು ಒದಗಿಸುವ ಮೂಲಕ ಅವರು ಇತರರಂತೆ ಸ್ವಾವಲಂಭಿಗಳಾಗಿ ಘನತೆಯಿಂದ ಬದುಕಲು ಬೇಕಾದ ಪೂರಕ ವಾತಾವರಣ ಕಲ್ಪಿಸಲು ರಾಜ್ಯ ಸರ್ಕಾರವು ಬದ್ಧವಾಗಿರುತ್ತದೆ. ವಿಶೇಷಚೇತನರ ಹಕ್ಕುಗಳ ಅಧಿನಿಯಮ 2016ರ ಕಲಂ 2(zc)ರ ಷೆಡ್ಯೂಲ್-1ಲ್ಲಿ ದೈಹಿಕ ವಿಕಲತೆ, ಬೌದ್ಧಿಕ ವಿಕಲತೆ, ಮಾನಸಿಕ ವರ್ತನೆಗಳು, ದೀರ್ಘಕಾಲಿಕ ನರವೈಜ್ಞಾನಿಕ ಸ್ಥಿತಿಯಿಂದ ಉಂಟಾದ ಅಂಗವೈಕಲ್ಯ, ಬಹುವಿಧ ವಿಕಲತೆ ಅಡಿಯಲ್ಲಿ ಒಟ್ಟು 21 ವಿಶೇಷಚೇತನ ವಿಧಗಳನ್ನು ಪಟ್ಟಿ ಮಾಡಲಾಗಿದೆ. ಸದರಿ ಕಾಯ್ದೆಯ ಕಲಂ(3)ರ ಅಡಿಯಲ್ಲಿ ಈ ಪಟ್ಟಿಯ ಪೈಕಿ ಯಾವುದೇ ರೀತಿಯ ಅಂಗವೈಕಲ್ಯವಿರುವ ವಿಶೇಷಚೇತನ ವ್ಯಕ್ತಿ ಮತ್ತು ವ್ಯಕ್ತಿಗಳು ಸಾರ್ವಜನಿಕ ಸ್ಥಳ ಅಥವಾ ಕಛೇರಿಗಳಲ್ಲಿ ವ್ಯವಹರಿಸಲು ವಿಶೇಷಚೇತನರ ಸ್ನೇಹಿ ವಾತಾವರಣ ಮತ್ತು ವ್ಯವಸ್ಥೆಗಳನ್ನು ಹೊಂದುವುದು ಅವರ ಹಕ್ಕಾಗಿರುತ್ತದೆ. ಕಾರಣ ಗ್ರಾಮ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಜಿಲ್ಲಾ ಪಂಚಾಯತಿಗಳು ವಿಶೇಷಚೇತನರ ಸ್ನೇಹಿ

ಪಂಚಾಯತಿಗಳಾಗಿ ಕಾರ್ಯನಿರ್ವಹಿಸುವುದರ ಮೂಲಕ ತಮ್ಮ ತಮ್ಮ ಕಾರ್ಯಕ್ಷೇತ್ರದಲ್ಲಿನ ವಿಶೇಷಚೇತನರ ಹಕ್ಕುಗಳ ರಕ್ಷಣೆ ಎಲ್ಲರ ಹೊಣೆಯಾಗಿರುತ್ತದೆ.

ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ಅಭಿವೃದ್ಧಿ ಯೋಜನೆಗಳಲ್ಲಿ ವಿಶೇಷಚೇತನರ ಸರ್ವತೋಮುಖ ಅಭಿವೃದ್ಧಿಯನ್ನು ಪರಿಗಣಿಸಿ ಅನುಷ್ಠಾನಗೊಳಿಸಬೇಕಾಗಿದೆ. ವಿಶೇಷಚೇತನರ ಕಾಯ್ದೆ ಬಗ್ಗೆ ಸಮುದಾಯದಲ್ಲಿ ಅಧಿಕಾರಿ ಹಾಗೂ ಅಧಿಕಾರೇತರರಲ್ಲಿ ಅರಿವು ಮೂಡಿಸುವುದು, ವಿಶೇಷಚೇತನರನ್ನು ಗುರುತಿಸಿ ಅವರಿಗೆ UDID ಕಾರ್ಡ್ ಒದಗಿಸುವುದು, ವಿಶೇಷಚೇತನರ ಮತ್ತು ಅವರ ಜೊತೆ ಕಾರ್ಯನಿರ್ವಹಿಸುವ ಆಶಾ, ಅಂಗನವಾಡಿ ಕಾರ್ಯಕರ್ತೆಯರ, ಎಎನ್‌ಎಮ್, ಶಾಲಾ ಶಿಕ್ಷಕರು, ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ, ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರ ಸಾಮರ್ಥ್ಯ ಅಭಿವೃದ್ಧಿಪಡಿಸುವುದು, ಕೌಶಲ್ಯ ಅಭಿವೃದ್ಧಿ ಯೋಜನೆಗಳಲ್ಲಿ ವಿಶೇಷಚೇತನರ ಸರ್ವತೋಮುಖ ಅಭಿವೃದ್ಧಿಗೊಳಿಸುವುದರೊಂದಿಗೆ ಸಮುದಾಯ ಆಧಾರಿತ ಕಾರ್ಯಗಳಿಗೆ ಪ್ರಾಧಾನ್ಯತೆ ನೀಡುವುದು.

ಈ ಹಿನ್ನಲೆಯಲ್ಲಿ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಿಗೆ ಲಭ್ಯವಾಗಿರುವ ಅನುದಾನದಲ್ಲಿ ಶೇಕಡ 5%ರಷ್ಟು ಅನುದಾನವನ್ನು ವಿಶೇಷಚೇತನರ ಕಲ್ಯಾಣಕ್ಕಾಗಿ ಬಳಸಲು ಉಲ್ಲೇಖಿತ ಪತ್ರ(1)ರ ಮೂಲಕ ಸರ್ಕಾರದಿಂದ ಆದೇಶಿಸಲಾಗಿದೆ. ಕಾರಣ 15ನೇ ಹಣಕಾಸು ಯೋಜನೆ ಅಡಿಯಲ್ಲಿ ಲಭ್ಯವಿರುವ ಅನುದಾನ ಹಾಗೂ ಸ್ವಂತ ಸಂಪನ್ಮೂಲಗಳಿಂದ ಬರುವ ಅನುದಾನ, ಸೇರಿಸಿ ಆಗುವ ಒಟ್ಟು ಅಭಿವೃದ್ಧಿಯ ಅನುದಾನದಲ್ಲಿ (ಸಂಬಳ ಬಾಬ್ತನ್ನು ಹೊರತುಪಡಿಸಿ) ಶೇಕಡ 5% ಅನುದಾನವನ್ನು ಪ್ರತಿ ವರ್ಷ ಕಾಯ್ದಿರಿಸಿ, ಸದರಿ ಅನುದಾನವನ್ನು ವಿಶೇಷಚೇತನರ ಸರ್ವತೋಮುಖ ಅಭಿವೃದ್ಧಿಗೆ ಬಳಸುವುದು.

ರಾಜ್ಯಮಟ್ಟದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ವಿಶೇಷಚೇತನ ಸಮುದಾಯದ ಪ್ರತಿನಿಧಿಗಳು, ಈ ಸಮುದಾಯದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಹಾಗೂ ಈ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ತಜ್ಞರೊಂದಿಗೆ ದಿನಾಂಕ:22-07-2020ರಂದು ಸಮಾಲೋಚನೆ ನಡೆಸಿ, ಸದರಿ ಸಭೆಯಲ್ಲಿ ಮೂಡಿಬಂದ ಸಲಹೆಗಳನ್ನು ಮತ್ತು ವಿಶೇಷಚೇತನರ ಹಕ್ಕುಗಳ ಅಧಿನಿಯಮ 2016ನ್ನು ಪರಾಮರ್ಶಿಸಿ ಈ ಕೆಳಕಂಡಂತೆ ಮೂಲಸೌಕರ್ಯ(Infra- Structural) ಮತ್ತು ಮೂಲಸೌಕರ್ಯವಲ್ಲದ (Non Infra-Structural) ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲು ಆದೇಶಿಸಲಾಗಿದೆ.

1. ಆಯಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯಲ್ಲಿನ ಜನಸಂಖ್ಯೆ ಆಧಾರದಮೇಲೆ 15ನೇ ಹಣಕಾಸು ಯೋಜನೆಯ ಅಡಿಯಲ್ಲಿ ಲಭ್ಯವಿರುವ ಅನುದಾನ ಮತ್ತು ಎಲ್ಲಾ ಸ್ವಂತ ಸಂಪನ್ಮೂಲಗಳಿಂದ ಬರುವ ಅನುದಾನ ಸೇರಿ ಅಭಿವೃದ್ಧಿಯ ಒಟ್ಟು ಅನುದಾನದಲ್ಲಿ (ಸಂಬಳ ಹೊರತುಪಡಿಸಿ) ಶೇಕಡ 5% ಅನುದಾನವನ್ನು ಪ್ರತೀ ವರ್ಷ ವಿಶೇಷಚೇತನರ ಸಮಗ್ರ ಅಭಿವೃದ್ಧಿಗಾಗಿ ಕಾಯ್ದಿರಿಸುವುದು.
2. ಹೀಗೆ ಕಾಯ್ದಿರಿಸಲಾದ ಶೇಕಡ 5%ರಷ್ಟು ಅನುದಾನವನ್ನು ವಿಶೇಷಚೇತನರ ಫಲಾನುಭವಿಗಳಿಗೆ ವೈಯಕ್ತಿಕ ಸೇವೆಗಳನ್ನು ನೀಡಲು ಬಳಸುವಂತಿಲ್ಲ. ಆದರೆ ವಿಶೇಷಚೇತನ ಸಮುದಾಯಕ್ಕೆ ಅನುಕೂಲವಾಗುವ ಸಮುದಾಯ ಅಭಿವೃದ್ಧಿ ಕಾರ್ಯಗಳಿಗೆ ಬಳಸುವುದು.

3. ಪ್ರತಿ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ತಮ್ಮ ಕಾರ್ಯ ಕ್ಷೇತ್ರದಲ್ಲಿ ಎಲ್ಲಾ ವಿಧದ ವಿಶೇಷಚೇತನರ ಸರ್ವತೋಮುಖ ಅಭಿವೃದ್ಧಿಗಾಗಿ ಮೂಲಸೌಕರ್ಯ ಮತ್ತು ಮೂಲಸೌಕರ್ಯವಲ್ಲದ ಅಭಿವೃದ್ಧಿ ಕಾರ್ಯಚಟುವಟಿಕೆಗಳ 05 ವರ್ಷದ ಸಮಗ್ರ ಯೋಜನೆಯನ್ನು ಸಿದ್ಧಪಡಿಸುವುದು. ಸದರಿ ಯೋಜನೆಯಲ್ಲಿ ಪ್ರತೀ ಆರ್ಥಿಕ ವರ್ಷದಲ್ಲಿ ಲಭ್ಯವಿರುವ ಅನುದಾನದಲ್ಲಿ ಅಭಿವೃದ್ಧಿ ಪಡಿಸಬಹುದಾದ ಅಭಿವೃದ್ಧಿ ಕಾರ್ಯಗಳನ್ನು ಪಟ್ಟಿಮಾಡಿ, ಅಂದಾಜಿನ ಕರಡನ್ನು ಸಿದ್ಧಪಡಿಸಿ, ಸಮಗ್ರ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಿ, ಅದೇ ಆರ್ಥಿಕ ವರ್ಷದಲ್ಲಿ ಆಯ್ಕೆಯಾಗಿರುವ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸುವುದು.

4. ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು ತಮ್ಮ ಜಿಲ್ಲೆಯಲ್ಲಿನ ಒಂದು ಗ್ರಾಮವನ್ನು ವಿಶೇಷಚೇತನರ ಸ್ನೇಹಿ ಮಾದರಿ ಗ್ರಾಮವನ್ನಾಗಿ ಅಭಿವೃದ್ಧಿ ಪಡಿಸಬೇಕು. ಈ ಗ್ರಾಮದಲ್ಲಿ ವಿಶೇಷಚೇತನರ ಹಕ್ಕುಗಳ ಕುರಿತು ಅರಿವು ಮೂಡಿಸಿರಬೇಕು, ಅರ್ಹ ವಿಶೇಷಚೇತನರು ಯುಡಿಐಡಿ ಕಾರ್ಡ್ ಹೊಂದಿರಬೇಕು, ಸಾರ್ವಜನಿಕ ಸ್ಥಳಗಳು ವಿಶೇಷಚೇತನರ ತಡೆರಹಿತ ವಾತವರಣ ಮತ್ತು ಮೂಲಭೂತ ಸೌಲಭ್ಯ ಹೊಂದಿರಬೇಕು, ಎಲ್ಲಾ ಅಭಿವೃದ್ಧಿ ಯೋಜನೆಗಳಲ್ಲಿ ವಿಶೇಷಚೇತನರ ಸರ್ವತೋಮುಖ ಅಭಿವೃದ್ಧಿಯನ್ನು ಪರಿಗಣಿಸಿರಬೇಕು. ಈ ಗ್ರಾಮವು ಇತರೆ ಗ್ರಾಮಗಳಿಗೆ ಮಾರ್ಗದರ್ಶಿ ಮತ್ತು ಪ್ರೇರಣೆಯಾಗುವಂತಿರಬೇಕು.

5. ಉಲ್ಲೇಖಿತ ಪತ್ರ (5)ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಪ್ರತಿ ತಾಲ್ಲೂಕು ಮಟ್ಟದಲ್ಲಿ ವಿಶೇಷಚೇತನರಿಗೆ ಸಂಬಂಧಿಸಿದ ಎಲ್ಲಾ ಕಾರ್ಯಕ್ರಮಗಳ/ಯೋಜನೆಗಳ ಉಸ್ತುವಾರಿ ಮಾಡಲು ಹಾಗೂ ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಆಯಾ ತಾಲ್ಲೂಕಿನ ಸಹಾಯಕ ಶಿಶು ಅಭಿವೃದ್ಧಿ ಅಧಿಕಾರಿಯನ್ನು ತಾಲ್ಲೂಕು ನೋಡಲ್ ಅಧಿಕಾರಿಯಾಗಿ ನೇಮಕ ಮಾಡಿ ಆದೇಶಿಸಲಾಗಿದೆ. ಸದರಿ ಆದೇಶದಲ್ಲಿ ತಿಳಿಸಿರುವಂತೆ, ಸಹಾಯಕ ಶಿಶುಅಭಿವೃದ್ಧಿ ಅಧಿಕಾರಿಗಳು ಕಾರ್ಯನಿರ್ವಹಿಸಲು ಎಲ್ಲಾ ರೀತಿಯ ಸಹಕಾರ ತಾಲ್ಲೂಕು ಪಂಚಾಯತಿಗಳು ನೀಡುವುದು.

6. ವಿಶೇಷಚೇತನರ ಸರ್ವತೋಮುಖ ಅಭಿವೃದ್ಧಿಗಾಗಿ ಸಂಬಂಧಿಸಿದ ಇಲಾಖೆಗಳಲ್ಲಿ ಹಾಗೂ ಇಲಾಖೇತರರಲ್ಲಿ ಲಭ್ಯವಿರುವ ಮಾನವ ಸಂಪನ್ಮೂಲ, ಅನುದಾನ, ಅನುಷ್ಠಾನಗೊಳಿಸಲಾಗುತ್ತಿರುವ ಕಾರ್ಯಕ್ರಮ/ಯೋಜನೆಗಳ ಸಮನ್ವಯತೆಗಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಡಳಿತದ ಸಹಭಾಗಿತ್ವದಲ್ಲಿ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಸಮನ್ವಯತೆಯ ಮೂಲಕ ಕಾರ್ಯನಿರ್ವಹಿಸುವುದು.

7. ವಿಶೇಷಚೇತನರ ಅಭಿವೃದ್ಧಿ ಕಾರ್ಯಗಳನ್ನು ಮುಖ್ಯವಾಹಿನಿಗೆ ತರಲು ಮತ್ತು ಯೋಜನೆಗಳನ್ನು ಅನುಷ್ಠಾನಗೊಳಿಸಲು ಮತ್ತು ಪರಿವೀಕ್ಷಣೆಗಾಗಿ ಈಗಾಗಲೇ ಜಾರಿಯಲ್ಲಿರುವ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಗ್ರಾಮೀಣ ಪುನರ್ವಸತಿ ಯೋಜನೆಗಳ ಅನುಷ್ಠಾನದ ಪ್ರಗತಿ ಪರಿಶೀಲನಾ ಸಮಿತಿಗಳು ವಿಶೇಷಚೇತನರ ಹಕ್ಕುಗಳ ಅಧಿನಿಯಮ 2016ರಲ್ಲಿ ತಿಳಿಸಿರುವಂತೆ ಕಾರ್ಯನಿರ್ವಹಿಸುವುದು. ತಾಲ್ಲೂಕು ಮಟ್ಟದ ಸಮಿತಿಯಲ್ಲಿ ಆಯಾ ತಾಲೂಕಿನಲ್ಲಿರುವ ಶಿಕ್ಷಣ ಇಲಾಖೆಯ ಕ್ಷೇತ್ರ ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕರು (Block Inclusive Education Resource Teacher-BIERT) ಗಳನ್ನು ಸಮಿತಿಯ ಸದಸ್ಯರನ್ನಾಗಿ ಸೇರ್ಪಡೆ ಮಾಡುವುದು.

8. ಗ್ರಾಮ ಪಂಚಾಯತಿ ಮಟ್ಟದಲ್ಲಿಯೂ ಗ್ರಾಮೀಣ ಅಂಗವಿಕಲರ ಪುನರ್ವಸತಿ ಕಾರ್ಯಕ್ರಮ ಅನುಷ್ಠಾನದ ಪರಿಶೀಲನಾ ಸಮಿತಿಗಳನ್ನು ಕೆಳಕಂಡಂತೆ ರಚಿಸುವುದು.

| | | |
|---|---|---|
| 1 | ಗ್ರಾಮ ಪಂಚಾಯತಿ ಅಧ್ಯಕ್ಷರು (ಚುನಾಯಿತ ಪ್ರತಿ ನಿಧಿ ಅವಧಿ ಮುಗಿದಿರುವಲ್ಲಿ ಸರ್ಕಾರಿ ಆದೇಶದಂತೆ ಜವಬ್ದಾರಿ ನಿರ್ವಹಿಸುವವರು) | ಅಧ್ಯಕ್ಷರು |
| 2 | ಗ್ರಾಮ ಪಂಚಾಯತಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷರು | ಸದಸ್ಯರು |
| 3 | ಗ್ರಾಮ ಲೆಕ್ಕಾಧಿಕಾರಿ/ಗಳು, | ಸದಸ್ಯರು |
| 4 | ಶಾಲಾ ಮುಖ್ಯೋಪಾಧ್ಯಯರುಗಳು | ಸದಸ್ಯರು |
| 5 | ಪ್ರತಿ ಶಾಲೆಯಿಂದ ಸಮನ್ವಯ ಶಿಕ್ಷಣ/BIERT ಯವರಿಂದ ವಿಶೇಷಚೇತನರ ಸಮನ್ವಯ ಶಿಕ್ಷಣದ ಬಗ್ಗೆ ತರಬೇತಿ ಹೊಂದಿರುವ ಒಬ್ಬ ಶಿಕ್ಷಕರು | ಸದಸ್ಯರು |
| 6 | ಆರೋಗ್ಯ ಕಾರ್ಯಕರ್ತೆಯರು (ಎಎನ್‌ಎಮ್) | ಸದಸ್ಯರು |
| 7 | ಆಶಾ ಕಾರ್ಯಕರ್ತೆಯರು | ಸದಸ್ಯರು |
| 8 | ಅಂಗನವಾಡಿ ಕಾರ್ಯಕರ್ತೆಯರು | ಸದಸ್ಯರು |
| 9 | ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿದಿಗಳು (ವಿಶೇಷಚೇತನರ ಅಭಿವೃದ್ಧಿ ಕಾರ್ಯಗಳಲ್ಲಿ ಕಾರ್ಯನಿರ್ವಹಿಸುವ) | ಸದಸ್ಯರು |
| 10 | ಸ್ವ ಸಹಾಯ ಸಂಘದ ಮತ್ತು ಜಿಪಿಎಲ್‌ಎಫ್ ಪ್ರತಿನಿಧಿ | ಸದಸ್ಯರು |
| 11 | ಒಬ್ಬರು ಹಿರಿಯ ನಾಗರಿಕರು (ಗ್ರಾಮ ಪಂಚಾಯತಿಯಿಂದ ನಾಮನಿರ್ದೇಶನ ಮಾಡುವುದು) | ಸದಸ್ಯರು |
| 12 | ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು | ಸದಸ್ಯರು |
| 13 | ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು | ಸದಸ್ಯ ಕಾರ್ಯದರ್ಶಿ |

ಈ ಸುತ್ತೋಲೆ ತಲುಪಿದ 15 ದಿನಗಳ ಒಳಗೆ ಸಮಿತಿಯನ್ನು ರಚಿಸಿ, ಕಚೇರಿಗೆ ವರದಿಯನ್ನು ಸಲ್ಲಿಸುವುದು ಹಾಗೂ ಕಾರ್ಯನಿರ್ವಹಿಸುವುದು.

9. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಸಮಿತಿಗಳು ಪ್ರತೀ ವರ್ಷ ಡಿಸೆಂಬರ್ 3 ರಂದು "ವಿಶ್ವ ವಿಕಲ ಚೇತನರ ದಿನ"ವನ್ನು ಆಚರಿಸಬೇಕು ಮತ್ತು ಸದರಿ ದಿನ ಶೇಕಡ 5% ಅನುದಾನವನ್ನು ಬಳಸಿ ತಮ್ಮ ತಮ್ಮ ಕಾರ್ಯಕ್ಷೇತ್ರದಲ್ಲಿ ಅನುಷ್ಠಾನಗೊಳಿಸಲಾದ ವಿಶೇಷಚೇತನರ ಸರ್ವತೋಮುಖ ಅಭಿವೃದ್ಧಿ ಕೆಲಸಗಳು ಮತ್ತು ಯೋಜನೆಗಳಿಂದ ಪ್ರಯೋಜನೆ ಪಡೆದ ವಿಶೇಷಚೇತನರ ಕುರಿತು ವರದಿ ತಯಾರಿಸಿ ಪ್ರಸ್ತುತಪಡಿಸಬೇಕು.

ಮೂಲಸೌಕರ್ಯ (Infra-Structural) ಕಾರ್ಯಗಳು:

1. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಈಗಾಗಲೇ ಇರುವ ಸಾರ್ವಜನಿಕ ಕಚೇರಿಗಳು, ಸರ್ಕಾರದ ಸಂಸ್ಥೆಗಳು, ಶಾಲೆಗಳು, ಅಂಗನವಾಡಿಗಳು, ಆರೋಗ್ಯ ಕೇಂದ್ರಗಳು ವಿಶೇಷಚೇತನರ ಸ್ನೇಹಿ ಕಟ್ಟಡಗಳಾಗಿದೆಯೇ ಎಂದು ಪರಿಪೀಕ್ಷಿಸಿ ಸುರಕ್ಷತೆಯ ಆಡಿಟ್ (Safety Audit) ಮಾಡುವುದು. ಜಿಲ್ಲಾ ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಗಳು ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ಕಟ್ಟಡಗಳ ಸುರಕ್ಷತೆಯ ಆಡಿಟ್‌ಗಾಗಿ ವಿಶೇಷಚೇತನರ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವ ಸ್ವಯಂ ಸೇವಾ ಸಂಸ್ಥೆಗಳನ್ನು, ಜಿಪಿಎಲ್‌ಎಫ್‌ಗಳನ್ನು ಗುರುತಿಸಿ, ಇವರೊಂದಿಗೆ ಈ ಕ್ಷೇತ್ರದ ತಾಂತ್ರಿಕ ಅನುಭವ ಹೊಂದಿರುವ ಒಬ್ಬ ಅಭಿಯಂತರರನ್ನು ಸೇರಿಸಿ, ಅಗತ್ಯವಿರುವಷ್ಟು ತಂಡಗಳನ್ನು ರಚಿಸಿ ಅವರಿಗೆ ಸುರಕ್ಷತೆ ಆಡಿಟ್ ಬಗ್ಗೆ ಜಿಲ್ಲಾ ಮಟ್ಟದಲ್ಲಿ ತರಬೇತಿ ನೀಡುವುದು.

2. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳು ಕೆಳಕಂಡ ಸ್ಥಳಗಳಲ್ಲಿ ಆದ್ಯತೆಯ ಮೇರೆಗೆ ವಿಶೇಷಚೇತನರ ಹಕ್ಕುಗಳ ಕಾಯ್ದೆ 2016ರ ಕಲಂ 16(2), 25(1)(ಬಿ), 41(1)(ಬಿ), 45(1)(2)ರನ್ವಯ ವಿಶೇಷಚೇತನರಿಗೆ ತಡೆರಹಿತ ಮುಕ್ತ ಪರಿಸರಕ್ಕಾಗಿ ರ್‍ಯಾಂಪ್ ಮತ್ತು ವಿಶೇಷಚೇತನ ಸ್ನೇಹಿ ಶೌಚಾಲಯಗಳ ವ್ಯವಸ್ಥೆ ನಿರ್ಮಿಸುವುದು. ಈಗಾಗಲೇ ನಿರ್ಮಿಸಿದ್ದಲ್ಲಿ, ಅವುಗಳು ಸರಿಯಾದ ತಾಂತ್ರಿಕ ಮಾರ್ಗದರ್ಶನ ಅನುಸರಿಸಿ ನಿರ್ಮಿಸಲಾಗಿದೆಯೇ? ಎಂಬುದನ್ನು ಪರಿಶೀಲಿಸಿ, "ಮಾರ್ಪಾಡು ಮಾಡಬಹುದಾದ" ಕಟ್ಟಡಗಳನ್ನು ವಿಶೇಷಚೇತನರಿಗೆ ತಡೆರಹಿತ ಮುಕ್ತ ಪರಿಸರವನ್ನು ಅಭಿವೃದ್ಧಿ ಪಡಿಸಲು ಸೂಕ್ತವಾದ ರೀತಿಯಲ್ಲಿ ತಾಂತ್ರಿಕ ಮಾರ್ಗದರ್ಶಿಗಳನ್ನು ಅನುಸರಿಸಿ ರೆಟ್ರೋಫಿಟ್ಟಿಂಗ್ (Retrofitting) ಮಾಡಿಸುವುದು.

- ಪ್ರಾಥಮಿಕ ಆರೋಗ್ಯ ಕೇಂದ್ರಗಳು/ಉಪ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು
- ಶಾಲೆಗಳು, ಪದವಿಪೂರ್ವ ಕಾಲೇಜುಗಳು
- ವಸತಿ ಶಾಲೆಗಳು/ ವಸತಿ ನಿಲಯಗಳು
- ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಕಛೇರಿಗಳು,
- ಅಂಗನವಾಡಿ ಕೇಂದ್ರಗಳು
- ಸರ್ಕಾರಿ ಕಚೇರಿಗಳು,
- ಸಾರ್ವಜನಿಕ ಕಟ್ಟಡಗಳು,
- ಸಾರ್ವಜನಿಕ ಸ್ಥಳಗಳಾದ ಪಾರ್ಕ್, ಆಟದ ಮೈದಾನ, ಮಾರುಕಟ್ಟೆ

ಒಂದುವೇಳೆ ಮೇಲೆ ತಿಳಿಸಲಾದ ಸ್ಥಳಗಳಲ್ಲಿ ಈ ವ್ಯವಸ್ಥೆಗಳು ಇಲ್ಲದಿದ್ದಲ್ಲಿ ತಾಂತ್ರಿಕ ಮಾರ್ಗದರ್ಶಿಗಳನ್ನು ಅನುಸರಿಸಿ ಮೇಲೆ ತಿಳಿಸಿರುವಂತೆ ಆದ್ಯತೆಯ ಮೇರೆಗೆ ಹೊಸದಾಗಿ ನಿರ್ಮಿಸುವುದು.

3. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳಿಂದ, ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ವಿಶೇಷಚೇತನರ ಹಕ್ಕುಗಳ ಅಧಿನಿಯಮ 2016ರಲ್ಲಿ ತಿಳಿಸಿರುವಂತೆ 21 ಅಂಗವೈಕಲ್ಯ ವಿಧಗಳನ್ನು ಪತ್ತೆ ಹಚ್ಚಲು ವಿಶೇಷಚೇತನ ವ್ಯಕ್ತಿಗಳ ತಪಾಸಣೆಗಾಗಿ ಅಗತ್ಯವಿರುವ ಉಪಕರಣಗಳ ಮತ್ತು ಯಂತ್ರಗಳ ವ್ಯವಸ್ಥೆಯನ್ನು ಆರೋಗ್ಯ ಇಲಾಖೆಯ ಸಹಾಯದಿಂದ ಮಾಡುವುದು.

4. ಪ್ರತಿ ತಾಲ್ಲೂಕು ಪಂಚಾತಿಯು ತಮ್ಮ ಹಂತದಲ್ಲಿ ವಿಶೇಷಚೇತನರ "ಸಂಪನ್ಮೂಲ ನೆಲೆ" ಸ್ಥಾಪನೆ ಮಾಡಿ ಅಲ್ಲಿ ಅವಶ್ಯಕ ಸಾಧನ-ಸಲಕರಣೆಗಳ ತಯಾರಿ, ಪೂರೈಕೆ ಮತ್ತು ದುರಸ್ತಿ ಮಾಡುವ ವ್ಯವಸ್ಥೆಯನ್ನು ಕಲ್ಪಿಸುವುದು.
5. ವಿಶೇಷಚೇತನರ ಸ್ನೇಹಿ ತಡೆಮುಕ್ತ ನಿರ್ಮಿತ ಪರಿಸರವನ್ನು ಅಭಿವೃದ್ಧಿ ಪಡಿಸಲು ಸಂಬಂಧಿಸಿದಂತೆ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳು ಅನುಸರಿಸಬೇಕಾದ ತಾಂತ್ರಿಕ ಅಂಶಗಳ ಕುರಿತು, ತಾಂತ್ರಿಕ ಕೈಪಿಡಿಯನ್ನು ಅನುಬಂಧ-1ರಲ್ಲಿ ಹಾಗೂ ಏಐಸಿಟಿಇ ಮಾರ್ಗದರ್ಶಿಗಳನ್ನು ಅನುಬಂಧ-2ರಲ್ಲಿ ತಿಳಿಸಿರುವಂತೆ ಅನುಸರಿಸಲು ಸೂಕ್ತ ಕ್ರಮಕ್ಕಾಗಿ ಲಗತ್ತಿಸಿದೆ.
6. ಸರ್ಕಾರದ ಯಾವುದೇ ಯೋಜನೆಗಳಲ್ಲಿ ಅಥವಾ ಸರ್ಕಾರದಿಂದ ನಿರ್ಮಿಸುವ ಹೊಸ ಕಟ್ಟಡಗಳನ್ನು ವಿಶೇಷಚೇತನರಿಗೆ ಅನುಕೂಲವಾಗುವಂತೆ ತಡೆರಹಿತ ಮುಕ್ತ ಪರಿಸರಕ್ಕಾಗಿ ಸೂಕ್ತವಾದ ರೀತಿಯಲ್ಲಿ ಈ ಸುತ್ತೋಲೆಯೊಂದಿಗೆ ಲಗತ್ತಿಸಲಾದ ತಾಂತ್ರಿಕ ಮಾರ್ಗದರ್ಶಿಗಳನ್ನು ಅನುಸರಿಸಿ ಕಟ್ಟಡಗಳನ್ನು ನಿರ್ಮಿಸುವುದು.

ಮೂಲಸೌಕರ್ಯವಲ್ಲದ (Non Infra-Structural) ಕಾರ್ಯಗಳು:

1. ಎಲ್ಲಾ ಗ್ರಾಮ ಪಂಚಾಯತಿಯಲ್ಲಿ ರಚಿಸಲಾದ ಗ್ರಾಮೀಣ ಅಂಗವಿಕಲರ ಪುನರ್ವಸತಿ ಕಾರ್ಯಕ್ರಮ ಅನುಷ್ಠಾನದ ಪರಿಶೀಲನಾ ಸಮಿತಿಗಳ ಸದಸ್ಯರಿಗೆ ವಿಶೇಷಚೇತನರ ಹಕ್ಕುಗಳ ಅಧಿನಿಯಮ 2016, ವಿಶೇಷಚೇತನರ ಯೋಜನೆಗಳು ಮತ್ತು ಸಮೀಕ್ಷೆ ಕುರಿತು ತರಬೇತಿ ನೀಡುವುದು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತಿ ಕಾರ್ಯನಿರ್ವಾಕ ಅಧಿಕಾರಿಗಳು ಈ ಕ್ಷೇತ್ರದಲ್ಲಿ ಪರಿಣಿತಿ ಹೊಂದಿದ ಸ್ವಯಂ ಸೇವಾ ಸಂಸ್ಥೆಗಳ ಪರಿಣಿತರು, ಶೈಕ್ಷಣಿಕ ಪರಿಣಿತರು, ಆರೋಗ್ಯ ಇಲಾಖೆಯ ವಿಷಯ ಪರಿಣಿತರನ್ನು ಗುರುತಿಸಿ ಅವರಿಂದ ತರಬೇತಿಯನ್ನು ನೀಡುವುದು.
2. ವಿಶೇಷಚೇತನರ ಸಮೀಕ್ಷೆ:

- ಗ್ರಾಮ ಪಂಚಾಯತಿ ಮಟ್ಟದ ಗ್ರಾಮೀಣ ಅಂಗವಿಕಲರ ಪುನರ್ವಸತಿ ಕಾರ್ಯಕ್ರಮ ಅನುಷ್ಠಾನದ ಪರಿಶೀಲನಾ ಸಮಿತಿಯು ಈ ಸಮೀಕ್ಷೆಗಾಗಿ ಗ್ರಾಮ ಮಟ್ಟದಲ್ಲಿರುವ ಆಶಾ, ಅಂಗನವಾಡಿ ಕಾರ್ಯಕರ್ತರು, ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು, ಶಿಕ್ಷಕರು, ಸ್ವಸಹಾಯ ಸಂಘಗಳ ಮತ್ತು ಜಿಪಿಎಲ್‌ಎಫ್‌ಗಳ ಪ್ರತಿನಿಧಿಗಳು, ಇವರನ್ನೊಳಗೊಂಡ ತಂಡಗಳನ್ನು ರಚಿಸಬೇಕು ಹಾಗೂ ಈ ತಂಡಗಳಿಗೆ ಸಮೀಕ್ಷೆಯ ಕುರಿತು ವಿಷಯ ಪರಿಣಿತರು ಹಾಗೂ ಆರೋಗ್ಯ ಇಲಾಖೆಯ ಪರಿಣಿತರಿಂದ ತರಬೇತಿಯನ್ನು ನೀಡುವುದು.
- ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸಮೀಕ್ಷೆಯ ನಮೂನೆ ಹಾಗೂ ಅಗತ್ಯ ವ್ಯವಸ್ಥೆಯೊಂದಿಗೆ ಸಮೀಕ್ಷೆ ಹಾಗೂ ನೋಂದಣಿ ಕಾರ್ಯವನ್ನು ಜಿಲ್ಲಾ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ನಿಗಧಿಪಡಿಸಿದ ಅವಧಿಯೊಳಗೆ ಪೂರ್ಣಗೊಳಿಸುವುದು.
- ವಿಶೇಷಚೇತನರ ಹಕ್ಕುಗಳ ಕಾಯಿದೆ 2016 ರಲ್ಲಿ ತಿಳಿಸಲಾದ 21 ವಿಧಗಳನ್ನು ಅನುಬಂಧ-3 ರಲ್ಲಿ ತಿಳಿಸಲಾಗಿದೆ.
- ಸಮೀಕ್ಷಾ ತಂಡಗಳಿಂದ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಎಲ್ಲಾ ಗ್ರಾಮ/ಜನವಸತಿ ಪ್ರದೇಶಗಳಲ್ಲಿನ ವಿಶೇಷಚೇತನರ ಹಕ್ಕುಗಳ ಅಧಿನಿಯಮ 2016ಕಲಂ 17(ಎ), 25(2) ಎಬಿಸಿ ಹಾಗೂ 2(zc)ರ ಷೆಡ್ಯೂಲ್-

1ರಲ್ಲಿ ತಿಳಿಸಿರುವಂತೆ 21 ವಿಶೇಷಚೇತನ ವಿಧಗಳ ವ್ಯಕ್ತಿಗಳನ್ನು ಗುರಿತಿಸಿ ವಿಶೇಷಚೇತನರ ಸಮಗ್ರ ಪಟ್ಟಿಯನ್ನು ತಯಾರಿಸುವುದು.

- ಸಮೀಕ್ಷೆಯಲ್ಲಿ ಗುರುತಿಸಲಾದ ವಿಶೇಷಚೇತನ ವ್ಯಕ್ತಿಗಳನ್ನು ಸ್ವಾವಲಂಭನ್ ಕಾರ್ಡ್ (ವಿಶಿಷ್ಟ ಅಂಗವೈಕಲ್ಯ ಐಡಿ-UDID) ಪಡೆಯಲು ಭಾರತ ಸರ್ಕಾರದಿಂದ ಅಭಿವೃದ್ಧಿ ಪಡಿಸಲಾದ swavlambancard.gov.in ನಲ್ಲಿ ನೋಂದಣಿ ಮಾಡಿಸಬೇಕು. ವಿಶೇಷಚೇತನರು ಸ್ವಯಂ ದಾಖಲಾತಿಗೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ಅಗತ್ಯ ನೆರವು ನೀಡುವುದು.
- ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಅರ್ಹ ವಿಶೇಷಚೇತನರಿಗೆ UDID ಯನ್ನು ನೀಡುವಂತಾಗಲು ಕಾಲಮಿತಿಯನ್ನು ಜಿಲ್ಲಾ ಪಂಚಾಯತಿ ಕಾರ್ಯ ನಿರ್ವಾಹಕಾಧಿಕಾರಿಗಳು ನಿಗಧಿಪಡಿಸುವುದು ಮತ್ತು VRW ಗಳಿಂದ ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸುವ ಜವಾಬ್ದಾರಿಯನ್ನು ಆಯಾ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಮತ್ತು ತಾಲ್ಲೂಕು ಮಟ್ಟದ ಸಹಾಯಕ ಶಿಸುಅಭಿವೃದ್ಧಿ ಯೋಜನಾ ಅಧಿಕಾರಿಗಳಿಗೆ ನೀಡುವುದು.
- ಪ್ರತಿ ವರ್ಷ ಎಲ್ಲಾ ಶಾಲಾ ಮತ್ತು ಅಂಗನವಾಡಿ ಮಕ್ಕಳನ್ನು ಸಮೀಕ್ಷೆ ನಡೆಸಿ ವಿಶೇಷಚೇತನರ ಹಕ್ಕುಗಳ ಅಧಿನಿಯಮ 2016ರ 2(zc)ರ ಷೆಡ್ಯೂಲ್-1ರಲ್ಲಿ ತಿಳಿಸಿರುವಂತೆ 21 ವಿಶೇಷಚೇತನ ವಿಧಗಳ ಪೈಕಿ ಯಾವುದಾದರು ವೈಕಲ್ಯತೆ ಇದ್ದಲ್ಲಿ ಅಂತಹ ಮಕ್ಕಳನ್ನು ಗುರುತಿಸುವುದು. ಈ ಮೂಲಕ ಶಾಲೆ ಮತ್ತು ಅಂಗನವಾಡಿ ಕೇಂದ್ರುಗಳ ಮಕ್ಕಳಲ್ಲಿನ ನಿರ್ಧಿಷ್ಟ ಕಲಿಕಾ ವೈಕಲ್ಯತೆ (Specific Learning Disability-SLD) ಪತ್ತೆ ಹಚ್ಚುವ ಕೆಲಸ ವಿಶೇಷ ಆದ್ಯತೆಯಲ್ಲಿ ಆಗಬೇಕಿದೆ. ಗುರುತಿಸಿದ ಪಟ್ಟಿಯನ್ನು ಗ್ರಾಮ ಪಂಚಾಯತಿ ಮಟ್ಟದ ಗ್ರಾಮೀಣ ಅಂಗವಿಕಲರ ಪುನರ್ವಸತಿ ಕಾರ್ಯಕ್ರಮ ಅನುಷ್ಠಾನದ ಪರಿಶೀಲನಾ ಸಮಿತಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸುವುದು.

3. ತರಬೇತಿ ಮತ್ತು ಅರಿವು ಮೂಡಿಸುವ ಕಾರ್ಯಕ್ರಮಗಳು:

- ಜಿಲ್ಲಾ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ತರಬೇತಿಗಳಿಗೆ ಜಿಲ್ಲೆಯಲ್ಲಿನ ವಿಶೇಷಚೇತನರ ಕ್ಷೇತ್ರದಲ್ಲಿ ಪರಿಣತಿ ಹೊಂದಿದ ಸ್ವಯಂ ಸೇವಾ ಸಂಸ್ಥೆಗಳನ್ನು ಗುರುತಿಸಿ ಅವರಿಂದ ತರಬೇತಿಗಳಿಗೆ ನೆರವು ಪಡೆಯುವುದು.
- ಜಿಲ್ಲಾ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲೆಯಲ್ಲಿನ ಸಿವಿಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಲಾಖೆಗಳ ಪಿಆರ್‌ಇಡಿ, ಪಿಡಬ್ಲ್ಯೂಡಿ, ಕೆಆರ್‌ಐಡಿಎಲ್, ಮಹಾತ್ಮಗಾಂಧಿ ನರೇಗಾ ಯೋಜನೆಯ ಇಂಜಿನಿಯರುಗಳಿಗೆ ವಿಶೇಷಚೇತನರ ತಡೆರಹಿತ ಮುಕ್ತ ವಾತಾವರಣ ಕಲ್ಪಿಸಲು ವಿಶೇಷಚೇತನರ ಸ್ನೇಹಿ ಕಟ್ಟಡಗಳ ನಿರ್ಮಾಣ ಕುರಿತು ಹಾಗೂ ಮಾಡಬಹುದಾದ ಕಟ್ಟಡಗಳ ಮಾರ್ಪಾಡುಗಳ ರೆಟ್ರೋಫಿಟ್ಟಿಂಗ್ (Retrofitting) ಕುರಿತು ತರಬೇತಿ ನೀಡುವುದು.
- ವಿಶೇಷಚೇತನರ ಹಕ್ಕುಗಳ ಕಾಯಿದೆ, ವಿಶೇಷಚೇತನರ ಸಮೀಕ್ಷೆ ಮತ್ತು ಅರ್ಹರಿಗೆ ಯುಡಿಐಡಿ ಕಾರ್ಡ್ (ವಿಶಿಷ್ಟ ಅಂಗವೈಕಲ್ಯ ಐಡಿ-UDID) ಒದಗಿಸುವ ಹಾಗೂ ವಿಶೇಷಚೇತನರಿಗೆ ಇರುವ ಸರ್ಕಾರಿ ಯೋಜನೆಗಳ ಕುರಿತು ಗ್ರಾಮ ಪಂಚಾಯತಿಯ ವಾರ್ಡ್ ಸಭೆಗಳಲ್ಲಿ, ಗ್ರಾಮ ಸಭೆಗಳಲ್ಲಿ, ಗ್ರಾಮ ಪಂಚಾಯತಿ ಸಾಮಾನ್ಯ ಸಭೆಗಳಲ್ಲಿ, ಸಮುದಾಯ ಆಧಾರಿತ ಕಾರ್ಯಕ್ರಮಗಳಲ್ಲಿ ಅರಿವು ಮೂಡಿಸುವುದು.

- ವಿಶೇಷ ಅಗತ್ಯವಿರುವ ಮಕ್ಕಳ ಶಿಕ್ಷಣ, ಮಕ್ಕಳಲ್ಲಿನ ನಿರ್ಧಿಷ್ಟ ಕಲಿಕಾ ವಿಕಲತೆ (Specific Learning Disability-SLD), ಸಮುದಾಯ ಆಧಾರಿತ ಪುನರ್ವಸತಿ ಸೇವೆಗಳ ಮಹತ್ವ ಕುರಿತು ಹಾಗೂ ವಿಶೇಷಚೇತನ ಮಕ್ಕಳು ಕಲಿಕೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಲು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು, ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು, ಆಶಾ, ಅಂಗನವಾಡಿ ಕಾರ್ಯಕರ್ತೆ, ಶಿಕ್ಷಕರು ಇವರುಗಳಿಗೆ ತರಬೇತಿ ನೀಡುವುದು.
- ಶಾಲೆಗಳಲ್ಲಿ ವಿಶೇಷಚೇತನ ಮಕ್ಕಳ ಸಮನ್ವಯ ಶಿಕ್ಷಣ ತರಬೇತಿ ಹೊಂದಿದ ಶಿಕ್ಷಕರಿಗೆ Signageಗಳನ್ನು ಬಳಸುವ ಕುರಿತು ತರಬೇತಿ ನೀಡಿ, ವಿಶೇಷಚೇತನರ ಕಲಿಕೆಗೆ ಉಪಯುಕ್ತವಾಗುವ Signageಗಳನ್ನು ಶಾಲೆಗಳಲ್ಲಿ ಬಳಸುವುದು ಹಾಗೂ BIERT ಗಳು ಬಳಕೆ ಕುರಿತು ಖಾತರಿಪಡಿಸುವುದು.
- ವಿಶೇಷಚೇತನರಿಗೆ ತಡೆಮುಕ್ತ ನಿರ್ಮಿತ ಪರಿಸರವನ್ನು ಅಭಿವೃದ್ಧಿಪಡಿಸುವ ಯೋಜನೆಗಳು, ಮಕ್ಕಳಲ್ಲಿನ ನಿರ್ದಿಷ್ಟ ಕಲಿಕಾ ವೈಕಲ್ಯತೆ ಪತ್ತೆ ಹಚ್ಚುವ ಯೋಜನೆಗಳು, ಶಿಕ್ಷಣ ಮತ್ತು ತಪಾಸಣೆ ಮುಂತಾದ ನಿರ್ಣಾಯಕ ಅಂಶಗಳ ಕುರಿತು ಎಲ್ಲಾ ಹಂತದ ಚುನಾಯಿತ ಪ್ರತಿನಿಧಿಗಳಿಗೆ, ಸಿಬ್ಬಂದಿಗಳಿಗೆ ಮತ್ತು ಸಮುದಾಯ ಕಾರ್ಯಕರ್ತರಿಗೆ ತರಬೇತಿ ನೀಡುವುದು.
- ಮಕ್ಕಳೊಂದಿಗೆ ಹೇಗೆ ಉತ್ತಮವಾಗಿ ಕೆಲಸ ಮಾಡಲು ಸಾಧ್ಯ ಎಂಬುದರ ಕುರಿತು ಪೋಷಕರಿಗೆ ಮತ್ತು ಮಕ್ಕಳೊಂದಿಗೆ ಕೆಲಸ ಮಾಡುವ ಸಿಬ್ಬಂದಿಗಳಿಗೆ ಈ ಕುರಿತು ಕೌಶಲ್ಯ ಅಭಿವೃದ್ಧಿ ತರಬೇತಿ ನೀಡುವುದು.
- ಗ್ರಾಮ ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ವಿಶೇಷಚೇತನರು ಅಥವಾ ಅವರ ಆರೈಕೆದಾರರು ಸ್ತ್ರೀಶಕ್ತಿ ಗುಂಪಿನಲ್ಲಿ/ಸ್ವ-ಸಹಾಯ (SHG) ಗುಂಪುಗಳಲ್ಲಿ ಅಥವಾ ಇನ್ಯಾವುದೇ ಸ್ವಸಹಾಯ ಸಂಘಗಳಲ್ಲಿ ಸದಸ್ಯರಾಗುವಂತೆ ಕ್ರಮ ವಹಿಸುವುದು. ಇದರ ಮೂಲಕ ವಿಕಲ ಚೇತನರ ಪುನಃಶ್ಚೇತನ ಮಾಡುವುದು ಮತ್ತು ಅವರ ಪಾಲಕ-ಪೋಷಕರಿಗೆ ಸಹ ಪುನಃಶ್ಚೇತನ ಬಗ್ಗೆ ತರಬೇತಿ ನೀಡುವುದು ಹಾಗೂ ಉಸ್ತುವಾರಿ ಜವಾಬ್ದಾರಿಯನ್ನು VRW, MRW, & BIERT ರವರಿಗೆ ವಹಿಸುವುದು.
- ಅಂಗವೈಕಲ್ಯವನ್ನು ಪ್ರಾರಂಭದಲ್ಲಿಯೇ ಗುರುತಿಸಲು ಮತ್ತು ಪತ್ತೆ ಹಚ್ಚಲು ಆರೋಗ್ಯ ಕೇಂದ್ರಗಳು, ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಸೂಕ್ತ ವ್ಯವಸ್ಥೆ ಮಾಡುವುದು ಹಾಗೂ ಈ ಕುರಿತು ತರಬೇತಿಗಳನ್ನು ನೀಡುವುದು.
- ವಿಶೇಷಚೇತನ ವ್ಯಕ್ತಿಗಳ ಆರೈಕೆದಾರರಿಗೆ ವೈದ್ಯಕೀಯ ಮತ್ತು ಸಾಮಾಜಿಕ ಪುನರ್ವಸತಿ ಬಗ್ಗೆ ಕೌಶಲ್ಯ ತರಬೇತಿ ಏರ್ಪಡಿಸುವುದು ಮತ್ತು ಅವರಿಗೆ ದೊರೆಯಬೇಕಾದ ಸೌಲಭ್ಯಗಳನ್ನು ಒದಗಿಸುವುದು.
- ಸರಳ ಸಹಾಯಕ ಸಾಧನಗಳ ಮತ್ತು ಶ್ರವಣ ಸಾಧನಗಳ ರಿಪೇರಿ ಮತ್ತು ನಿರ್ವಹಣೆ ಕುರಿತು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಗೆ, ಜಿಪಿಎಲ್‌ಎಫ್ ಪ್ರತಿನಿಧಿಗಳಿಗೆ ತರಬೇತಿ ನೀಡುವುದು.
- ಸರಳ ಸಹಾಯಕ ಸಾಧನಗಳ ಮತ್ತು ಶ್ರವಣ ಸಾಧನಗಳ ದುರಸ್ತಿಗಾಗಿ ಸ್ಥಳೀಯವಾಗಿ ಲಭ್ಯವಿರುವ ನುರಿತರು, ಇವರುಗಳಲ್ಲಿ ಚಮ್ಮಾರ, ಬಡಗಿ ಮುಂತಾದವರನ್ನು ಗುರುತಿಸಿ ತರಬೇತಿ ನೀಡುವುದು.

4. ಪ್ರತಿ ವರ್ಷ ತಾಲ್ಲೂಕು ಮಟ್ಟದಲ್ಲಿ ವಿಶೇಷಚೇತನ ಮಕ್ಕಳ ನಾಯಕತ್ವ ಬೆಳವಣಿಗೆ ಶಿಬಿರವನ್ನು ಹಮ್ಮಿಕೊಂಡು ಅದರಲ್ಲಿ ಕೌಶಲ್ಯಾಭಿವೃದ್ಧಿ, ಶೈಕ್ಷಣಿಕ ಅವಕಾಶಗಳು (Career Guidance) ಕುರಿತು ತರಬೇತಿ ನೀಡುವುದು ಮತ್ತು ಆಟೋಟಗಳ, ಸಾಂಸ್ಕೃತಿಕ ಚಟುವಟಿಕೆಗಳ ಸ್ಪರ್ಧೆಯನ್ನು ಏರ್ಪಡಿಸುವುದು.

5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲೆಯಲ್ಲಿನ ಜಿಲ್ಲಾ ಮಟ್ಟದ ಕ್ಷೇತ್ರ ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕರು (BIERT) ಹಾಗೂ ತಾಲ್ಲೂಕು ಮಟ್ಟದ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ (Rasthriya Bal Swasthya Karyakram-RBSK)ವನ್ನು ವಿಶೇಷಚೇತನರ ಸರ್ವತೋಮುಖ ಅಭಿವೃದ್ಧಿಗೆ ಸಮರ್ಪಕವಾಗಿ ಬಳಸಿಕೊಳ್ಳುವುದು.

ಈ ಮೇಲೆ ತಿಳಿಸಿರುವಂತೆ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ರಚನಾತ್ಮಕ ಮತ್ತು ರಚನಾತ್ಮಕವಲ್ಲದ ಅಭಿವೃದ್ಧಿ ಕಾರ್ಯಗಳನ್ನು ಮತ್ತು ಚಟುವಟಿಕೆಗಳನ್ನು ವಿಶೇಷಚೇತನರ ಸಮಗ್ರ ಅಭಿವೃದ್ಧಿಗಾಗಿ ರೂಪಿಸಿ ಎಲ್ಲಾ ಬಾಗೀದಾರರು ಸಂಯೋಜಿತವಾಗಿ ತಮ್ಮ ತಮ್ಮ ಕಾರ್ಯಕ್ಷೇತ್ರದಲ್ಲಿನ ವಿಶೇಷಚೇತನರ ಹಕ್ಕುಗಳ ರಕ್ಷಣೆಗೆ ಕಾರ್ಯನಿರ್ವಹಿಸುವುದು.

18/9/2020

(ಎಲ್.ಕೆ. ಅತೀಕ್)

ಸರ್ಕಾರದ ಪ್ರಧಾನ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಇವರಿಗೆ,

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
3. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು.
4. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳಿಗೆ.
5. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
6. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು.
7. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತಮಹಲ್ ರಸ್ತೆ, ಮೈಸೂರು.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿರವರ ಮಾಹಿತಿಗಾಗಿ.
3. ನಿರ್ದೇಶಕರು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಸಹಾಯಕರು.

4. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಸಹಾಯಕರು.
5. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
6. ವೆಬ್ ಸೈಟ್, ಗ್ರಾಮೀಣಾಭವೃದ್ಧಿ ಮತ್ತು ಪಂ.ರಾಜ್ ಇಲಾಖೆ.